**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**Spl.C(SC/ST).No.: 2/2020**

ಪಿ.ಡಬ್ಲ್ಯೂ ನಂ:**18**
ಸಿ.ಡಬ್ಲ್ಯೂ ನಂ:**20**

Form No.4(Civil)
Deposition Sheets
(R.P.No.57)

ಸಾಕ್ಷಿಯನ್ನು ದಿನಾಂಕ: **19-05-2026**
ರಂದು ಪ್ರತಿಜ್ಞೆ ಮಾಡಿಸಲಾಯಿತು

ಸಾಕ್ಷಿದಾರನ ಹೆಸರು : ದೇವಪ್ಪ
ತಂದೆಯ ಹೆಸರು : ಕರೆ ಮೈಲಪ್ಪ
ವಯಸ್ಸು : **47** ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ತಿಗರಿ

ಸಾಕ್ಷಿಯ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದ

ನನಗೆ ತೋರಿಸಿದ ನಿ.ಪಿ.**15** ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿದಾರರ ಸಹಿಯನ್ನು ನಿಪಿ **15**(ಬಿ) ಎಂದು ಗುರುತಿಸಲಾಯಿತು. ದಿ: **15.10.2019** ರಂದು ಪೊಲೀಸರು ತಿಗರಿ ಗ್ರಾಮದ ಸಮುದಾಯ ಭವನ ಮತ್ತು ಸಾರೆಮ್ಮ ಗುಡಿಯ ಬಳಿ ಪಂಚನಾಮೆ ಮಾಡಿದರು. ಚಾಸಾ **15** ಗುಡದಪ್ಪ ಆ ಜಾಗವನ್ನು ತೋರಿಸಿದರು. ಸಂಜೆ **4.30** ದಿಂದ **5.30** ರವರೆಗೆ ಪಂಚನಾಮೆ ಬರೆದರು. ಪೊಲೀಸರು ಪಂಚನಾಮೆಯನ್ನು ಓದಿ ಹೇಳಿ ಸಹಿ ಪಡೆದರು. ನಿ.ಪಿ.**16** ಪೋಟೋವನ್ನು ಆ ಸಮಯ ತೆಗೆದಿದ್ದರು. ನಾನು, ಚಾಸಾ **15** ಮತ್ತು ಚಾಸಾ**19** ಪಂಚನಾಮೆಗೆ ಸಹಿ ಮಾಡಿದ್ದೇವೆ.

ಪಾಟೀ ಸವಾಲು : ಆರೋಪಿತರ ಪರ ಶ್ರೀ ವೈಜೆಆರ್ ವಕೀಲರಿಂದ

**2).** ನಾನು ತಿಗರಿ ಗ್ರಾಮದಲ್ಲಿ ವಾಸ ಇದ್ದೇನೆ. ಪೊಲೀಸರು ಸ್ಥಳಕ್ಕೆ ಬರುವಂತೆ ನನಗೆ ನೋಟಿಸ ಕೊಟ್ಟಿರಲ್ಲಿ. ಪೊಲೀಸರು ಬಂದಾಗ ನಾನು ಸಮುದಾಯ ಭವನದ ಬಳಿ ಇದ್ದೆ. ಪೋಲಿಸರು ಬಂದ ನಂತರ ಸಾರ್ವಜನಿಕರು ಆ ಸ್ಥಳಕ್ಕೆ ಬಂದರು. ಮದುವೆ ಮಾಡಿದ ಜಾಗ ಯಾವುದು ಎಂದು ಪೊಲೀಸರು ನನ್ನನ್ನು ಕೇಳಲಿಲ್ಲ ಆದರೆ ಚಾಸಾ **15** ರವರನ್ನು ಕೇಳಿದ್ದು ಅವರು ಜಾಗ ತೋರಿಸಿದರು. ಸಮುದಾಯ ಭವನದ

ಹೊರಗೆ ಸಿಸಿ ರಸ್ತೆಯಲ್ಲಿ ಪೊಲೀಸರು ಪಂಚನಾಮೆಯನ್ನು ನಮ್ಮನ್ನು ವಿಚಾರಿಸಿ ಬರೆದರು.

**3.** ನಾಟಕಗಳಲ್ಲಿ ನಾನು ಹಾರ್ಮೋನಿಯಂ ಬಾರಿಸುತ್ತೇನೆ ಮತ್ತು ಬೇರೆ ಬೇರೆ ಊರುಗಳಿಗೆ ಕಾರ್ಯಕ್ರಮಕ್ಕೆ ಹೋಗುತ್ತೇನೆ ಎಂದರೆ ಸರಿ. ಪೊಲೀಸರು ನಿ.ಪಿ.**16** ಪೊಟೋ ಸ್ಥಳದಲ್ಲಿ ತೆಗೆದಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಘಟನೆ ಬಗ್ಗೆ ಮಾಹಿತಿ ಇಲ್ಲದೆ ಇದ್ದರೂ ಪೊಲೀಸರ ಮಾತು ಕೇಳಿ ಪಂಚನಾಮೆಗೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.